**<u>ದಿನಾಂಕಃ 20.09.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ 4 ನೇ ಪ್ರತಿ**ವಾದಿ ಪರ ಶ್ರೀ.** ಆರ್.ಎನ್ **ವಕೀಲರಿಂದಃ**</u>

ಈ ದಾವೆಯನ್ನು ಸಲ್ಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಈ ದಾವೆಯ ವಾದಪತ್ರ, ಪ್ರತಿವಾದ ಪತ್ರ , ಮಧ್ಯಂತರ ಅರ್ಜಿ ಮತ್ತು ದಾಖಲಾತಿಗಳನ್ನು ನಾನು ನೋಡಿ ತಿಳಿದುಕೊಂಡಿರುತ್ತೇನೆ. ನಾನು ಎಸ್.ಬಿ.ಐ ಬ್ಯಾಂಕಿನಲ್ಲಿ ಕ್ಯಾಶೀಯರ್ ಆಗಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿರುತ್ತೇನೆ. ನಾನು ದಿನಾಂಕ 23.03.1977 ರಲ್ಲಿ ನಾನು ಬ್ಯಾಂಕಿನಲ್ಲಿ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ನಾನು ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. 1977 ರಿಂದ 1980 ರವರೆಗೆ ಬಳ್ಳಾರಿಯಲ್ಲಿ, 1980 ರಿಂದ 2011 ರವರೆಗೆ ಮೈಸೂರಿನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಟಿ.ನರಸೀಪುರದಲ್ಲಿ ಕರ್ತವ್ಯ ನಿರ್ವಹಿಸರುವುದಿಲ್ಲ. 1980 ರಿಂದ 2011 ರವರೆಗೆ ಬೈರಾಪುರದ ಮನೆಯಿಂದ ಮೈಸೂರಿಗೆ ಕೆಲಸಕ್ಕೆ ಓಡಾಡುತ್ತಿದ್ದೆನು. ಸದರಿ ಬೈರಾಪುರದ ಮನೆಯ ಸಂಖ್ಯೆ 208. ಸದರಿ ಮನೆಯ ಖಾತೆಯು ನನ್ನ ತಂದೆಯ ಹೆಸರಿನಲ್ಲಿರುತ್ತದೆ. ನನ್ನ ತಂದೆಗೆ ಸದರಿ ಮನೆ ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ಇರಲಿಲ್ಲ. ನಾನು ಮೈಸೂರಿನಲ್ಲಿ ಒಂದು ಮನೆಯನ್ನು 1992 ರಲ್ಲಿ ನಿರ್ಮಿಸಿರುತ್ತೇನೆ. 2.ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ದಾವಾ ಅನುಸೂಚಿ ಸ್ವತ್ತಿನ ಖಾತೆಯು ನನ್ನ ಹೆಸರಿನಲ್ಲಿರುತ್ತದೆ. ಸದರಿ ಖಾತೆಯು ನನ್ನ ಹೆಸರಿನಲ್ಲಿ ಇರುವ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ. ಅದೇ ರೀತಿ ದಾವಾ ಅನುಸೂಚಿ ಸ್ವತ್ತಿನ ಖಾತಾ ದಾಖಲಾತಿಗಳನ್ನು ಸಹ ಹಾಜರುಪಡಿಸಿರುತ್ತೇನೆ . ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಾನು 2 ದಾವೆಗಳನ್ನು ಸಲ್ಲಿಸಿರುತ್ತೇನೆ. ನನ್ನ ವಾದ ಪತ್ರದಲ್ಲಿ 4 ನೇ ಪ್ರತಿವಾದಿಯವರ ವಿರುದ್ಧ ಯಾವುದೇ ಆಪಾದನೆಗಳು ಇಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ವಿರುದ್ದ ಸಿದ್ದರಾಜು ಮತ್ತು ವೆಂಕಟಾಚಲ ರವರು 2 ದಾವೆಗಳನ್ನು ಸಲ್ಲಿಸಿರುತ್ತಾರೆ. ನಾನು ಸಿದ್ದರಾಜು ರವರ ವಿರುದ್ದ ಸಲ್ಲಿಸಿರುವ ದಾವೆಯಲ್ಲಿ ಈ ದಾವೆಯ 4 ನೇ ಪ್ರತಿವಾದಿಯಾದ ಸಲೀಂ ಅಹಮದ್ ರವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ.

3. ಈ ದಾವೆಯ 4 ನೇ ಪ್ರತಿವಾದಿಯಾದ ಸಲೀಂ ಅಹಮದ್ ರವರು ನನ್ನ ಮತ್ತು ವೆಂಕಟಾಚಲ ರವರ ವಿರುದ್ದ ಸಲ್ಲಿಸಿರುವ ಅಸಲು ದಾವಾ ಸಂಖ್ಯೆ 37/2014 ರ ವಿಚಾರ ನನಗೆ 5-6 ವರ್ಷಗಳ ಹಿಂದೆ ತಿಳಿದಿರುತ್ತದೆ ಆದರೆ ಸದರಿ ದಾವೆಯ ನೋಟೀಸು ನನ್ನ ಕೈ ಸೇರಿರುವುದಿಲ್ಲ. 1 ನೇ ಪ್ರತಿವಾದಿಯವರು ಕೆಂಡನಕೊಪ್ಪಲು ಗ್ರಾಮದವರು ಎಂದರೆ ಸರಿ. ಸದರಿ ಕೆಂಡನಕೊಪ್ಪಲು ಗ್ರಾಮವು ಕಾವೇರಿ ನದಿಯ ದಂಡೆಯ ಮೇಲಿದೆ ಎಂದರೆ ಸರಿ. ನದಿ ನೀರು ಹೆಚ್ಚಾದ್ದಾಗ ನದಿಯ ನೀರು ಕೆಂಡನಕೊಪ್ಪಲು ಗ್ರಾಮಕ್ಕೆ ನುಗ್ಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತಿನ ಉತ್ತರಕ್ಕೆ ರಸ್ತೆ ಇರುತ್ತದೆ. ಸದರಿ ರಸ್ತೆಯ ನಂತರ ಸೈಟ್ ನಂ 27 ಇರುತ್ತದೆ. ಸದರಿ ವಿಚಾರ ನನ್ನ ವಾದಪತ್ರದಲ್ಲಿ ನಮೂದಿಸಿರುವುದಿಲ್ಲ.

4. ನಾನು ಹೇಳಿದಂತೆ ದಾವಾ ಅನುಸೂಚಿ ಸ್ವತ್ತಿನ ಹಕ್ಕು ಪತ್ರವನ್ನು ಟಿ.ನರಸೀಪುರದ ಬಿಡಿಓ ರವರು ವಿತರಿಸಿರುತ್ತಾರೆ. ಸದರಿ ಹಕ್ಕು ಪತ್ರ ವಿತರಿಸುವ ಸಮಯದಲ್ಲಿ ಬಿಡಿಓ ಕಚೇರಿಯಲ್ಲಿ ಒಂದು ಪುಸ್ತಕ ನಿರ್ವಹಿಸಿರುತ್ತಾರೆ ಎಂದರೆ ಸರಿ. ಸದರಿ ಪುಸ್ತಕವನ್ನು ಹಾಜರುಪಡಿಸಬೇಕಾಗಿತ್ತು ಆದರೆ ಹಾಜರುಪಡಿಸಿರುವುದಿಲ್ಲ. ಈಗ ಸದರಿ ಪುಸ್ತಕವನ್ನು ಹಾಜರುಪಡಿಸಲು ತೊಂದರೆಯಿದೆಯೇ ಎಂದರೆ ಈಗ ತಕರಾರು ಇರುವುದರಿಂದ ಸದರಿ ಪ್ರತಿಗಳನ್ನು ನೀಡುವುದಿಲ್ಲ ಎಂದು ನುಡಿಯುತ್ತಾರೆ.

5. ಸರ್ಕಾರವು ನಿವೇಶನಗಳನ್ನು ಮಂಜೂರು ಮಾಡುವ ಪೂರ್ವದಲ್ಲಿ ಹಲವಾರು ಸರ್ವೆ ನಂಬರಿನ ಜಮೀನುಗಳನ್ನು ಸ್ವಾದೀನ ಪಡಿಸಿಕೊಂಡಿತ್ತು ಆದರೆ ಸರ್ವೆ ನಂ ನನಗೆ ನೆನಪಿಲ್ಲ. ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಅನ್ಯಕ್ರಾಂತ ಆಗಿರುವುದಿಲ್ಲ. ನನ್ನ ನಿವೇಶನದ ಪಕ್ಕದಲ್ಲಿ ನಿವೇಶನ ಸಂಖ್ಯೆ 25 ನಾಗರತ್ನಮ್ಮ ರವರಿಗೆ ಮಂಜೂರು ಆಗಿತ್ತು. ಉಳಿದ ನಿವೇಶನಗಳು ಯಾರಿಗೆ ಮಂಜೂರು ಆಗಿವೆ ಎಂದು ನನಗೆ ಗೊತ್ತಿಲ್ಲ. ನಿವೇಶನ ಸಂಖ್ಯೆ 27 ಯಾರಿಗೆ ಮಂಜೂರಾಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತು ನನಗೆ ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ನಾನು ನಮೂದಿಸಿರುವ ಹಕ್ಕು ಪತ್ರವನ್ನು ನಾನೇ ಸೃಷ್ಟಿ ಮಾಡಿ ಸಲ್ಲಿಸಿದೆ ಎಂದರೆ ಸರಿಯಲ್ಲ.

6. ದಿನಾಂಕ 10.10.2011 ರಂದು 4 ನೇ ಪ್ರತಿವಾದಿಯವರು ನಿವೇಶನ ಸಂಖ್ಯೆ 23 ಅನ್ನು 1 ನೇ ಪ್ರತಿವಾದಿಯವರಿಂದ ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿದಾರರು ಮುಂದುವರೆದು ನಿವೇಶನ ಸಂಖ್ಯೆ 23 ಕ್ಕೂ ನನಗೂ ಯಾವುದೆ ಸಂಬಂದವಿಲ್ಲ ಎಂದು ನುಡಿಯುತ್ತಾರೆ. ನಾನು ವಾದ ಪತ್ರದಲ್ಲಿ ನಮೂದಿಸಿರುವ ಚೆಕ್ಕು ಬಂಧಿಯೊಳಗಿನ ನಿವೇಶನವು ಬೈರಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ

ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯವರಿಗೆ ಸೇರಿದ ನಿವೇಶನವನ್ನು ನಾನು ನನ್ನದು ಎಂದು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 10.10.2011 ರಿಂದ 4 ನೇ ಪ್ರತಿವಾದಿಯವರು ನಿವೇಶನ ಸಂಖ್ಯೆ 23 ರಲ್ಲಿ ಸ್ವಾದೀನತೆ ಹೊಂದಿದ್ದಾರೆ ಎಂದರೆ ಸಾಕ್ಷಿದಾರರು ಸದರಿ ನಿವೇಶನ ಸಂಖ್ಯೆ 23 ಕ್ಕೂ ನನಗೂ ಯಾವುದೇ ಸಂಬಂಧವಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಿ ಮುಂದೂಡಲಾಯಿತು .

**ಮರುವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಲಯ, ಟಿ ನರಸಿಪುರ